**ಸಾಕ್ಷಿಯನ್ನು ದಿಃ *20/02/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಶ್ರೀ ಜಿಎಸಎಸ ವಕೀಲರಿಂದ ವಾದಿ ಪರವಾಗಿ.***

ನನಗೆ ಸಾಕ್ಷ ನುಡಿಯಲು ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ ಎಂದರೆ ನಿಜ. 15 ದಿವಸಗಳ ಹಿಂದೆ ಪ್ರತಿವಾದಿ ನಂ.1 ಇವರ ಹೇಳಿಕೆಯ ಮೇರೆಗೆ ನನ್ನ ನುಡಿ ಸಾಕ್ಷವನ್ನು ನುಡಿಯಲು ಬಂದಿದ್ದೇನೆ. ಶಂಕರ ಜಕಾತಿ ಇವರು ಈಶ್ವರ ಜಕಾತಿ ಇವರ ವಿರುದ್ದ ದಾವೆ ಹೂಡಿರುವ ವಿಷಯ ಸಂಗತಿ ನನಗೆ ಗೊತ್ತು. ಸದರಿಯವರು ಮನೆಗಳ ಆಸ್ತಿಯ ವಾಟ್ನಿ ಸಂಬಂಧ ಈ ದಾವೆ ಹೂಡಿದ್ದು ಇರುತ್ತದೆ. ದಾವಾದಾಸ್ತಿಗಳು ನಂಬರ, ಕ್ಷೇತ್ರ ಮತ್ತು ಎಲ್ಲಿ ಇವೆ ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯರು ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ನನ್ನ ಮನೆ ಅಂದರೆ ಪಟ್ಟಣ ಪಂಚಾಯತಿ ನಂ.1737 ಇರುತ್ತದೆ. ಸದರಿ ಮನೆಯಲ್ಲಿ ನನ್ನ ಅಣ್ಣ ವಾಸ ಮಾಡುತ್ತಿದ್ದಾನೆ. ಆರು ವರ್ಷಗಳಿಂದ ನಾನು ಬೇರೆ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ವಾದಿ ಮತ್ತು ಪ್ರತಿವಾದಿಯರ ವಾಟ್ನಿಯಲ್ಲಿ ಯಾವ ಹಿರಿಯರು ಪ್ರಸ್ತುತವಿದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ಸದರಿ ಸಮಯದಲ್ಲಿ ಪ್ರಸ್ತುತವಿರಲಿಲ್ಲ ಎಂದರೆ ನಿಜ.

2007 ರಲ್ಲಿ ಜಗಳವಾಗಿದೆ ಎಂದು ಹೇಳಲಾದ ಜಗಳದ ಕಾರಣವೇನು ಎಂಬ ಪ್ರಶ್ನೆಗೆ ಸಾಕ್ಷಿದಾರರು ಈಶ್ವರ ಜಕಾತಿ ಇವರ ಮನೆಯ ಜಾಗೆಯನ್ನು ಶಂಕರ ಜಕಾತಿ ಇವರು ಅತೀಕ್ರಮಣ ಮಾಡಿ ಅವರು ಮನೆ ಕಟ್ಟಿದಕ್ಕೆ ಜಗಳವಾಗಿರುತ್ತದೆ. ಈ ಕುರಿತು ನ್ಯಾಯಾಲಯದಲ್ಲಿ ದಾವೆ ಆಗಿರುತ್ತದೆ. ಸದರಿ ದಾವೆಯಲ್ಲಿ ಆಗಿರುವ ತೀರ್ಮಾನದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರಸ್ತುತ ವಾದಿಯರು ಯಾವುದೇ ರೀತಿ ಅತೀಕ್ರಮಣ ಮಾಡಿರುವುದಿಲ್ಲ ಎಂಬ ಆದೇಶವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಯ ನಡುವೆ ಈಗಾಗಲೇ ವಾಟ್ನಿಯಾಗಿದೆ ಎಂದು ಹೇಳಿರುವ ವಿಷಯ ಸಂಗತಿ ಪ್ರತಿವಾದಿಯ ಹೇಳಿಕೆ ಮೇರೆಗೆ ಹೇಳಿರುವ ಸುಳ್ಳು ಸಂಗತಿ ಎಂದರೆ ಸರಿಯಲ್ಲ. ಪಕ್ಷಗಾರರ ಮನೆತನದ ಕುರಿತು ನನಗೆ ಯಾವುದೇ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.